**3 ನೇ  ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿ.ಸಿ.ನಂಬರಃ 1005/2022**

D.W -2

| | | |
|---|---|---|
| **ಸಾಕ್ಷಿದಾರರ ಹೆಸರು** | : | ಮೌಲಾಸಾಬ ಗಣಜೂರು |
| **ತಂದೆಯ ಹೆಸರು** | : | ಮಹಬೂಬ ಸಾಬ |
| **ವಯಸ್ಸು** | : | 47 ವರ್ಷ |
| **ಉದ್ಯೋಗ** | : | ದಲ್ಲಾಳಿ |
| **ವಾಸ** | : | ಕನವಳ್ಳಿ ತಾಲೂಕು ಹಾವೇರಿ |

**ದಿನಾಂಕಃ 22.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಎಸ್ ಎ ಕೆ ವಕೀಲರಿಂದ**

1. ಆರೋಪಿ ನನಗೆ ಕಳೆದ 25-30 ವರ್ಷಗಳಿಂದ ಪರಿಚಯ. ಆತ ನನಗೆ ಸಂಬಂಧಿಕನಾಗಬೇಕು. ಹಾನಗಲ್ ತಾಲೂಕಿನ ತಿಳುವಳ್ಳಿ ಹಾರ್ಡ್‌ವೇರ್ ಅಂಗಡಿ ಇದೆ. ನಾನು ಆರೋಪಿಗೆ ಹಾವೇರಿಯಲ್ಲಿಯ 1 ಎಕರೆ ಜಮೀನು ಅದರ ಮೊದಲಿನ ಮಾಲೀಕರಾದ ಮೆಹಬೂವಸಾಬ ಗಣಜೂರು ಅವರಿಕೆಡೆಯಿಂದ ವ್ಯಾಪಾರ ಮಾಡಿಸಿದ್ದೆ. ಅದು ಒಟ್ಟು ಪ್ರತಿಫಲದ ಹಣ 12 ಲಕ್ಷ ಆಗಿತ್ತು. ಅದನ್ನು 2019-20 ರಲ್ಲಿ ಆಗಿತ್ತು. ಮಾತುಕತೆ ಆದ ನಂತರ ಸಂಚಗಾರ ಅಂತಾ 1 ಸಾವಿರ ಕೊಡಲಾಗಿತ್ತು. 5 ಲಕ್ಷ ಮುಂಗಡ ಚೆಕ್ಕನ್ನು ಕೊಡಲು ಮತ್ತು ಕರಾರು ಪತ್ರ ಬರೆಸಿಕೊಳ್ಳಲು  ಕರಾರು ಆಗಿತ್ತು. ಸದರಿ ಆರೋಪಿ ಚೆಕ್ಕನ್ನು ಜಮೀನು ಮಾಲೀಕರಿಗೆ ಸಂಚಗಾರ ಹಣ ಕೊಡು ಎಂದು ನನಗೆ ಕೊಟ್ಟಿದ್ದರು. ಸದರಿ ಚೆಕ್ಕು ಬ್ಯಾಂಕ್ ಆಫ್ ಬರೋಡಾದ್ದು ಇತ್ತು. ಈಗ ನನಗೆ ತೋರಿಸಲಾದ ನಿಪಿ-1 ಅದೇ ಚೆಕ್ಕು ಇತ್ತು.

2. ನಿಪಿ-1 ಚೆಕ್ಕಿನ ಮೇಲೆ ನನಗೆ ಕೊಡುವ ಸಮಯದಲ್ಲಿ ಹಣದ ಮೊಬಲಗು, ಹಣ ಅಂಕಿ ಚೆಕ್ಕಿನ ಮೇಲೆ ಸಹಿ ಮಾತ್ರ ಮಾಡಲಾಗಿತ್ತು ಆದರೆ ದಿನಾಂಕ ಮತ್ತು ಹೆಸರು ನಮೂದಿಸಿರಲಿಲ್ಲ. ಸದರಿ ಅದು ವ್ಯವಹಾರ ಪೂರ್ಣಗೊಳ್ಳಲಿಲ್ಲ. ಸದರಿ ಚೆಕ್ಕು ನನ್ನ ಹತ್ತಿರ ಆರೊಪಿತನದ್ದು ಇತ್ತು ಅದನ್ನು ನಾನು ಆರೋಪಿಗೆ ಮರಳಿ ಕೊಟ್ಟಿರಲಿಲ್ಲ.

ಸಿ.ಸಿ.ನಂಬರಃ 1005/2022

D.W -2

3. ನನಗೆ ಪಿರ್ಯಾದಿ ಗೊತ್ತು ಆತ 7-8 ವರ್ಷಗಳಿಂದ ಪರಿಚಯ. ನಾನು ಪಿರ್ಯಾದಿ ಕಡೆಯಿಂದ ನನ್ನ ವಯಕ್ತಿಕ ಅಡಚಣೆಗಾಗಿ 3 ಪ್ರತಿಶತದಂತೆ 5 ಲಕ್ಷ ಹಣವನ್ನು ಆತನ ಕಡೆಯಿಂದ ಪಡೆದುಕೊಂಡಿದ್ದೆ. ಸದರಿ ಸಾಲವನ್ನು 2020 ರಲ್ಲಿ ಪಡೆದಿರುತ್ತೇನೆ. ಪ್ರತಿ ತಿಂಗಳಂತೆ ನಾನು 15 ಸಾವಿರ ಹಣವನ್ನು ಒಟ್ಟು 2 ವರೆ ವರ್ಷದವರೆಗೆ ಪಿರ್ಯಾದಿಗೆ ಕೊಟ್ಟಿರುತ್ತೇನೆ. ಬಡ್ಡಿ ಹಣ ಕೊಟ್ಟಿದ್ದಕ್ಕೆ ನಾನು ಬರೆದು ಇಟ್ಟು ಕೊಂಡಿರುತ್ತೇನೆ.

4. ಸದರಿ ಪಿರ್ಯಾದಿ 3 ವರ್ಷಗಳ ಹಿಂದೆ ನನ್ನ ಮನೆಗೆ ಬಂದು ಹಣ ಕೊಡು ಎಂದು ಗಲಾಟೆ ಮಾಡಿದ್ದರು ಆಗ ನಾನು ನನ್ನ ಚೆಕ್ಕನ್ನು ಆತನಿಗೆ ಕೊಟ್ಟಿರುತ್ತೇನೆ. ಆಗ ನನ್ನದ್ದು ಒಂದು ಚೆಕ್ಕು ಮತ್ತು ನಿಪಿ-1 ನ್ನು ನನ್ನ ಕಡೆಯಿಂದ ಪಡೆದುಕೊಂಡಿದ್ದ ನಾನು ನಿಪಿ-1 ಚೆಕ್ಕು ಸದರಿ ವ್ಯವಹಾರಕ್ಕೆ ಸಂಬಂಧಿಸಿದಲ್ಲ ಎಂದುಹೇಳಿದ್ದರು ಸಹ ವ್ಯವಹಾರ ಪೂರ್ಣಗೊಂಡ ನಂತರ ಮರಳಿ ಕೊಡುತ್ತೇನೆ ಎಂದು ಚೆಕ್ಕನ್ನು ತೆಗೆದುಕೊಂಡು ಹೋಗಿದ್ದನು. ನನ್ನ ಚೆಕ್ಕಿನ ಮೇಲೆ ಕೂಡಾ ಚೆಕ್ಕ ಅಮಾನ್ಯ ಪಿರ್ಯಾದಿ ದಾಖಲಿಸಿದ್ದಾನೆ. ನನ್ನ ಚೆಕ್ಕನ್ನು ರೂ. 6,50,000/- ಎಂದು ಬರೆದು ಹಾಕಿರುತ್ತಾನೆ. 5 ಲಕ್ಷ ಹಣಕ್ಕಾಗಿ ಪಿರ್ಯಾದಿ ಒಟ್ಟು 11,50,000/- ಹಣ ಸೇರಿದ್ದಾನೆ.

5. ಆರೋಪಿ ಮತ್ತು ಪಿರ್ಯಾದಿ ಮದ್ಯ ಕೊಡುವ ಮತ್ತು ತೆಗೆದುಕೊಳ್ಳುವ ಸಾಲ ವಗೈರೆ ಇದ್ದಿರಲಿಲ್ಲ. ಅದು ಅಲ್ಲದೇ ಆರೋಪಿ ಮತ್ತು ಪಿರ್ಯಾದಿ ಒಬ್ಬರಿಗೊಬ್ಬ ಪರಿಚಯಸ್ಥರು ಅಲ್ಲ. ನನ್ನ ಕಡೆ ಇದ್ದ ಆರೋಪಿತನ ಚೆಕ್ಕನ್ನು ತೆಗೆದುಕೊಂಡು ಹೋಗಿ ದುರುಪಯೋಗ ಪಡಿಸಿಕೊಂಡಿರುತ್ತಾನೆ. ಪಿರ್ಯಾದಿ ಆರೋಪಿ ಮತ್ತು ನನ್ನ ಮದ್ಯ ಹಣಕಾಸಿನ ವ್ಯವಹಾರ ಇದ್ದು ಆರೋಪಿ ತನ್ನ ಹಾರ್ಡವೇರ ಅಂಗಡಿಯ ಸುದಾರಣೆಗಾಗಿ 5 ಲಕ್ಷ ಸಾಲ ಅಂತಾ ಪಡೆದಿದ್ದ ಅದನ್ನು ತಿರುವಳಿಗಾಗಿ ನಿಪಿ-1 ಚೆಕ್ಕನ್ನು ಕೊಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದಾನೆ. ನನ್ನ ಸಾಲದ ಬಾಬತ್ತು ನಾನು ಒಂದು ಪುಸ್ತಕದಲ್ಲಿ ಬರೆದು ಇಟ್ಟಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿತ್ತೇನೆ.

ಸಿ.ಸಿ.ನಂಬರಃ 1005/2022

D.W -2

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕಾಲವಾಕಾಶ ನೀಡಲಾಯ್ತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫಸಿ, ರಾಣೆಬೆನ್ನೂರ.**

**ಸಾಕ್ಷಿದಾರರ ಸಹಿಃ**